'ನೀನು ಸಾಲಿ ಕಲತಿ, ಶ್ಯಾನ್ಯಾ ಆದಿ, ಓದಾಕ, ಬರಿಯಾಕ ಲೋಕದ ದ್ಯಾನ ನಿನಗೈತಿ, ನಿನಗ ಅವ್ವಾ ಅಪ್ಪಾ ಅದಾರ, ನೀನು ಪುಣ್ಯವಂತ. ನನಗ್ಯಾರದಾರ ಹೇಳು ಹನಮಾ...! ನಾನು ಎಂಥಾ ಪಾಪಿ ನೋಡು, ನಾನು ಈ ಭೂಮಿಗೆ ಬಂದ ಮೇಲೆ ಅವ್ವ- ಅಪ್ಪನ ಕಾಣದ ನತದೃಷ್ಟೆ. ಯಾರಿಗೆ ಅವ್ವಾ ಅನಬೇಕು, ಯಾರಿಗೆ ಅಪ್ಪಾ ಅನಬೇಕು?' ಪದ್ದಕ್ಕ ತುಂಬಾ ಭಾವುಕಳಾಗಿ ಅಳತೊಡಗಿದಳು. 'ಸುಮ್ಮನಿರು ಯಕ್ಕಾ ಅಳಬ್ಯಾಡ' ಅಂತ ಅಕಿ ಕಣ್ಣೀರು ವರೆಸುವ ಧೈರ್ಯವೂ ನಾನು ಮಾಡದೆ, ನಾನೂ ಅವಳೊಂದಿಗೆ ಹಾಗೆ ಅತ್ತುಬಿಟ್ಟೆ. ಆಗ ಅವಳೇ ಸುಮ್ಮನಾಗಿ ನನ್ನ ರಮಿಸಿದಳು.

ಪದ್ದಕ್ಕ ನನಗಿಂತ ಹತ್ತು- ಹನ್ನೆರಡು ವರ್ಷ ದೊಡ್ಡವಳು. ತೆಳ್ಳಗೆ ಇದ್ಲು. ಸ್ವಲ್ಪ ಮೈ ಬಣ್ಣ ಕಪ್ಪಗಿತ್ತು. ಅವಳ ಕಣ್ಣುಗಳು ಕವಳಿ ಹಣ್ಣಿನಂತೆ ಪಳಗುಟ್ಟುತ್ತಿದ್ದವು. ಯಾವಾಗಲೂ ಹೂವಿನ ಪರಕಾರು, ಜಂಪರ್ ಹಾಕುತ್ತಿದ್ಲು, ಸದಾ ನಗುಮುಖದ ಚೆಲುವೆ. ಕಪ್ಪಗಿದ್ರೂ ಕಳಾ ಇದ್ಲು. ನನ್ನನ್ನು ಥೇಟ್ ತನ್ನ ತಮ್ಮನಂತೇ ಕಾಣುತ್ತಿದ್ದಳು. ನಾನೂ ಬ್ಯಾಸಗಿ ಸೂಟಿಯ ರಜೆಯನ್ನು ಅವಳೊಂದಿಗೆ ಎಮ್ಮೆಬಾಲ ಹಿಡಿದುಕೊಂಡೆ ಕಳೆಯುತ್ತಿದ್ದೆ. ಅವಳೊಟ್ಟಿಗೆ ಇರುವಾಗ ನನಗೆ ತಾಯಿಯ ನೆನಪೇ ಆಗುತ್ತಿರಲಿಲ್ಲ. ಅಷ್ಟೊಂದು ಪ್ರೀತಿಯನ್ನು ಪದ್ದಕ್ಕ ನನ್ನ ಪುಟ್ಟ ಜೀವಕ್ಕೆ ಕೊಡುತ್ತಿದ್ದಳು.

ಒಂದು ವಾರ ನಾನು, ಪದ್ದಕ್ಕ ಇಬ್ಬರೂ ಬಿಟ್ಟು ಬಿಡದೇ ಹಿರೇಗುಡ್ಡಕ್ಕೆ ಎಮ್ಮೆ ಮೇಯಿಸಲು ಹೋದೆವು. ನನಗಂತೂ ಹಿರೇಗುಡ್ಡ ಸ್ವರ್ಗಾನುಭವ ನೀಡುತ್ತಿತ್ತು. ದಿನಕ್ಕೊಮ್ಮೆ ನಾನು ಗುಡ್ಡದ ತುದಿ ಏರಿ, ಕೂಗು ಹಾಕಿ, ಕುಪ್ಪಳಿಸಿ ಬರುತ್ತಿದ್ದೆ. ಪದ್ದಕ್ಕ ನನ್ನ ಖುಷಿಯಲ್ಲಿಯೇ ತನ್ನ ಖುಷಿ ಹುಡುಕುತ್ತಿದ್ದಳು.

ಸಂಜೆ ಕರಗಿ ಹೊರಟಿತ್ತು. ಸೂರ್ಯನೂ ತನ್ನ ತಾಯಿ ಹೊಟ್ಟೆ ಸೇರುವ ಕಾತುರದಲ್ಲಿದ್ದ. ಎಮ್ಮೆಗಳೂ ಹೊಟ್ಟೆ ತುಂಬಾ ಮೈದುದ್ದಕ್ಕೆ ಅವುಗಳ ಮೈಗಳೇ ಸಾಕ್ಷಿ ನುಡಿಯುತ್ತಿದ್ದವು. 'ಹನಮ್ಯಾ ಕತ್ತಲ ಆಗೂಕ ಮನಿ ಸೇರೂನು ನಡಿ' ಎಂದು ಪದ್ದಕ್ಕ ಗ್ರೀನ್ ಸಿಗ್ನಲ್ ಕೊಟ್ಟಾದ ಮೇಲೇ ನಾನು ಎಮ್ಮೆಗಳನ್ನು ಹೊಡೆದು ದಾರಿ ಹಿಡಿಸಿದೆ. ಪದ್ದಕ್ಕ ತಾನು ಕಾಲಮಡೆಯುವ ಸಲುವಾಗಿ ಹತ್ತು ಹೆಜ್ಜೆ ಹಿಂದೆ ಸರಿದಳು. ನಾನು ಎಮ್ಮೆ ಹಿಂದಿಂದ ಹೆಜ್ಜೆ ಹಾಕತೊಡಗಿದೆ. ಒಮ್ಮಿಂದೊಮ್ಮೆಲೇ ಪದ್ದಕ್ಕ ಕಿಟಾರನೇ ಕಿರಚಿದಳು. 'ಅಯ್ಯೋ ಹುನುಮಾ ಬಾ ಇಲ್ಲಿ' ಎಂದು ಕೂಗಿದಳು. ನಾನು ಗಾಬರಿಗೆಟ್ಟು ಕಲ್ಲುಮುಳ್ಳು ಲೆಕ್ಕಿಸದೇ ಓಡಿದೆ. ಹಾವೂಗೀವೂ ಏನಾದ್ರೂ ನೋಡಿದ್ಲಾ? ಚೇಳುಗೀಳು ಏನಾದ್ರೂ ಕಚ್ಚಿತಾ? ಅಳುಕಿನಲ್ಲೇ ಅವಳಿದ್ದಲ್ಲಿಗೆ ಓಡಿ ಹೋದೆ.

ಪದ್ದಕ್ಕ ಗಡಗಡ ನಡಗುತ್ತಾ ಕೈಮುಗಿದು ನಿಂತುಕೊಂಡಿದ್ದಳು. ಅವಳು ಕೈಮುಗಿದತ್ತ ಕತ್ತು ತಿರುಗಿಸಿದೆ. ಪರಮಾಶ್ಚರ್ಯ ನನಗೂ, ಕಲ್ಲಿನಲ್ಲಿಯೇ ಉದ್ಭವಗೊಂಡ ದೇವಿ ರೂಪ! ನಾನು ನೋಡಿದೊಡನೆ ಹೆದರಿದೆ, ನಡುಗಿದೆ, ಬೆವರಿದೆ, ಪದ್ದಕ್ಕ ನಿಧಾನಕ್ಕೆ, 'ಅಮ್ಮಾ' ಅಂದ್ಲು. ಅವಳ ದನಿಯಲ್ಲಿ ಭಕ್ತಿಯ ಶಕ್ತಿಯಿತ್ತು. ಹತ್ತಿರಕ್ಕೋದಳು. ಒಂದೆರಡು ಮುಳ್ಳುಕಂಟಿಗಳಿದ್ದವು ಅವನ್ನು ಲಟಲಟ ಮುರಿದಳು. ದೇವಿಯ ಮೈ ಮುಟ್ಟಿ, ಮಗುವಿನಂತೆ ಅವಳ ಮೈಸವರಿದಳು. ಅಲ್ಲಿ ಮತ್ತೊಂದು ಅಚ್ಚರಿ...! ದೇವಿಯ ಎದೆಯ ಮೇಲೆ ಮೂರು ಮೊಲೆಗಳಿದ್ದವು. 'ಐಯ್ ಶಿವನೇ ಇದ್ದೆಂಗೆ? ಶಿವನಿಗೆ ಮೂರು ಕಣ್ಣು ಇದ್ದಂಗ ಈ ಅಮ್ಮನಿಗೆ ಮೂರು ಮೊಲೆಯೇ?' ಪದ್ದಕ್ಕ ವಿಚಲಿತಗೊಂಡಳು. 'ಯಕ್ಕಾ ಈ ದೇವಿಗೆ ಮೂರ್‍ಯಾಕ ಮೊಲಿ' ಅಂದೆ. 'ಒಂದು ಮೊಲೆ ಬ್ರಹ್ಮಗ ಕುಡಿಸಿದ ಮೊಲೆ, ಮತ್ತೊಂದು ಮೊಲೆ ವಿಷ್ಣುವಿಗೆ ಕುಡಿಸಿದ ಮೊಲೆ, ಇನ್ನೊಂದು ಮೊಲೆ ಮಹೇಶ್ವರನಿಗೆ ಕುಡಿಸಿದ ಮೊಲೆ' ಅಂತ ಪದ್ದಕ್ಕ ಏನೇನೋ ಕತಿ ಕಟ್ಟಿ ಹೇಳಿದಳು. 'ಹಂಗಾರ ಈ ದೇವಿ ಮೂರ ಮೊಲೆ ದೇವಿನೇ ದೇವರಗಳ ತಾಯಿಯೇನು?' ಅಂದೆ. ಅಕಿ 'ಹೂಂ' ಅಂದ್ಲು. ಆಗ ನಾನು ಬರೀ ದೇವಿಯನ್ನೇ ನೋಡುತ್ತಾ ಭಕ್ತಿಯಿಂದ ಕೈಜೋಡಿಸಿದೆ. ಆ ಕ್ಷಣ ನನ್ನಲ್ಲೊಂದು ಏನೋ ಶಕ್ತಿ ಹರಿದು ಹೋದಂತನಿಸಿತು.

'ನಾನು ಅಮ್ಮನ ಮುಂದ ಕುಂತ ಕಾಲಮಡದ ಬಿಟ್ಟೆ ಹನಮಾ' ಎಂದು ಪದ್ದಕ್ಕ ಹಳಹಳಿ ಮಾಡಿ ಕೊಳ್ಳತೊಡಗಿದ್ಲು. 'ಯಕ್ಕಾ ನೀನೇನ ಬೇಕಂತ ಮಾಡಿಲ್ಲ, ದೇವಿ ನಿನ್ನ ಮ್ಯಾಲ ತಪ್ಪ ತಿಳಿಯಂಗಿಲ್ಲಾ, ನೀನss ಅಕೀನ ಮೊದಲ ಭಕ್ತೆ. ಅಕಿ ನಿನಗ ಮೊದಲ ದರಶನಾ ಕೊಟ್ಟಾಳ. ಅಕೀನss ನಿನ್ನ ತಾಯಿ' ಎಂದು ನಾನು ಏನೇನೋ ತತ್ವಗಳನ್ನು ಅವಳ